ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭ

29 (359) ಶ್ರೀ ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ):– ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಸವನಗುಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ವಿಜ್ಞಾನ ವಿಭಾಗ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಆರ್ಥಿಕವಾಗಿ ಹಿಂದುಳಿದವರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಕಾಲೇಜನ್ನು ತೆರೆಯಲು ಸಾಧ್ಯವಿದೆಯೇ;

ಇ) ಬಸವನಗುಡಿ ಕ್ಷೇತ್ರದ ವ್ಯಾಪ್ತಿಗೆ ಬರುವ ಕತ್ತರಿಗುಪ್ಪೆ ಸರ್ಕಾರಿ ಶಾಲೆ ಹಾಗೂ ಶ್ರೀನಗರ ಶಾಲೆಯಲ್ಲಿ 1 ರಿಂದ 8ನೇ ತರಗತಿವರೆಗೆ ಮಾತ್ರ ವ್ಯಾಸಂಗ ಮಾಡಲು ಅವಕಾಶವಿದ್ದು, 9 ಮತ್ತು 10ನೇ ತರಗತಿಯ ವಿದ್ಯಾಭ್ಯಾಸಕ್ಕೆ ಮಕ್ಕಳಿಗೆ ತುಂಬಾ ತೊಂದರೆಯಾಗಿದ್ದು, ಆರ್ಥಿಕವಾಗಿ ಹಿಂದುಳಿದವರನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗನೆ ಈ ಶಾಲೆಗಳನ್ನು ಮೇಲ್ದರ್ಜೆಗೇರಿಸಿ 9 ಮತ್ತು 10ನೇ ತರಗತಿಗೆ ಮಂಜೂರಾತಿ ಕೊಡಲು ಸಾಧ್ಯವಿದೆಯೇ;

ಈ) ಬೆಂಗಳೂರು ನಗರ ಜಿಲ್ಲೆ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿರುವ ಒಟ್ಟು ವಿಜ್ಞಾನ ಪದವಿ ಪೂರ್ವ ಕಾಲೇಜುಗಳ ವಿವರ ನೀಡುವುದು;

ಉ) ಹೊಸದಾಗಿ ವಿಜ್ಞಾನ ಪದವಿ ಪೂರ್ವ ಕಾಲೇಜುಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಜಿಲ್ಲಾವಾರು ವಿವರ ನೀಡುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಹೌದು

ಆ) ಸರ್ಕಾರವು ಈಗಾಗಲೇ ಮಂಜೂರಾತಿ ನೀಡಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡದಿರಲು ನಿರ್ಧರಿಸಿರುತ್ತದೆ.

ಇ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕತ್ತರಿಗುಪ್ಪೆ ಇಲ್ಲಿ 8ನೇ ತರಗತಿಯಲ್ಲಿ ಒಟ್ಟು 37 ವಿದ್ಯಾರ್ಥಿಗಳಿದ್ದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ, ಶಾಲೆಯನ್ನು ಉನ್ನತೀಕರಿಸಲು ಅವಕಾಶವಿರುವುದಿಲ್ಲ. ಈ ಶಾಲೆಯ ಸುತ್ತಮುತ್ತ ಐದು ಕಿ.ಮೀ. ವ್ಯಾಪ್ತಿಯಲ್ಲಿ 2 ಸರ್ಕಾರಿ, 5 ಅನುದಾನಿತ ಮತ್ತು 8 ಅನುದಾನರಹಿತ ಪ್ರೌಢಶಾಲೆಗಳಿರುತ್ತವೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀನಗರ ಇಲ್ಲಿ 8ನೇ ತರಗತಿಯಲ್ಲಿ ಒಟ್ಟು 61 ವಿದ್ಯಾರ್ಥಿಗಳಿದ್ದು, ಕಟ್ಟಡ ನಿರ್ಮಾಣಕ್ಕೆ ಸ್ಥಳಾವಕಾಶ ಲಭ್ಯತೆಯನ್ನು ಆಧರಿಸಿ ಈ ಶಾಲೆಯನ್ನು ಉನ್ನತೀಕರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 346 ವಿಜ್ಞಾನ ಸಂಯೋಜನೆ ಬೋಧಿಸುವ ಪದವಿ ಪೂರ್ವ ಕಾಲೇಜುಗಳು ಇರುತ್ತವೆ. ಅವುಗಳ ವಿವರ ಈ ಕೆಳಗಿನಂತಿದೆ.

ಪದವಿ ಪೂರ್ವ ಕಾಲೇಜುಗಳು	ಬೆಂಗಳೂರು ಉತ್ತರ	ಬೆಂಗಳೂರು ದಕ್ಷಿಣ	ಬೆಂಗಳೂರು ಗ್ರಾಮಾಂತರ
ಸರ್ಕಾರಿ	11	17	15
ಅನುದಾನಿತ	17	15	02
ವಿಭಜಿತ	10	15	–
ಮಹಾನಗರಪಾಲಿಕೆ	04	02	–
ಅನುದಾನರಹಿತ	98	129	11
ಒಟ್ಟು	140	178	28

ಉ) ಇಲ್ಲ

ಶ್ರೀ ಎಲ್.ಎ. ರವಿಸುಬ್ರಮಣ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇದು ಅಷ್ಟೊಂದು ಸಮರ್ಪಕವಾದ ಉತ್ತರವಾಗಿಲ್ಲವೆಂದು ನಾನು ಭಾವಿಸುತ್ತೇನೆ. ಬಸವನಗುಡಿ ಕ್ಷೇತ್ರ ಪ್ರಜ್ಞಾವಂತರ ಒಂದು ಕ್ಷೇತ್ರವೆಂದು ಹೆಸರು ಪಡೆದಿದೆ. ಸಾಕಷ್ಟು ಜನ ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರು ಇರುವಂಥ ಈ ಒಂದು ಕ್ಷೇತ್ರದ ಸುತ್ತಮುತ್ತಲಿನಲ್ಲಿ ಸರ್ಕಾರದ ಯಾವುದೇ ಒಂದು Junior College ಅಥವಾ First Grade College ಇಲ್ಲದೆ ಇರುವುದರಿಂದ ಬಹಳಷ್ಟು ಜನ ವಿದ್ಯಾರ್ಥಿಗಳು ತೊಂದರೆಯನ್ನು ಅನುಭವಿಸುತ್ತಿದ್ದಾರೆ. 8 ಮತ್ತು 9ನೇ ತರಗತಿಯಿಂದ ಉತ್ತೀರ್ಣರಾಗಿ ಬಂದಂಥವರಿಗೋಸ್ಕರ ಹೈಸ್ಕೂಲ್‌ನ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಅದೇ ರೀತಿಯಾಗಿ ಕಾಲೇಜುಗಳಿಗೆ

ಬರತಕ್ಕಂಥ ವಿದ್ಯಾರ್ಥಿಗಳಿಗೆ ಪಕ್ಕದಲ್ಲಿರುವ ಖಾಸಗಿ ಕಾಲೇಜುಗಳಲ್ಲಿ ಸೀಟ್ ಸಿಗುತ್ತಿಲ್ಲ. ಒಂದು ವೇಳೆ ಸೀಟ್ ಸಿಕ್ಕಿದರೂ ಸಹ ಅದಕ್ಕಾಗಿ 30 ರಿಂದ 35 ಸಾವಿರ ರೂಪಾಯಿ ಡೊನೇಷನ್ ಕೊಟ್ಟು ವಿದ್ಯಾಭ್ಯಾಸ ಮಾಡುವುದಕ್ಕೆ ಆಗದೆ ಇರುವ ಸ್ಥಿತಿ ಇರುವುದರಿಂದ, ಒಂದು ವಾಣಿಜ್ಯ ಅಥವಾ ವಿಜ್ಞಾನ ವಿಭಾಗದ ಕಾಲೇಜನ್ನು ತಕ್ಷಣವೇ ಆ ಭಾಗಕ್ಕೆ ಕೊಟ್ಟರೆ ಖಂಡಿತವಾಗಿಯೂ ಅಲ್ಲಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇಲ್ಲಿರುವ ವಿದ್ಯಾರ್ಥಿಗಳು ಸರ್ಕಾರಿ ಕಾಲೇಜಿಗಾಗಿ ಬಹಳಷ್ಟು ದೂರ ಹೋಗುವುದಕ್ಕೆ ಸಮಸ್ಯೆಯಾಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶ್ರೀಯುತ ರವಿಸುಬ್ರಮಣ್ಯರವರು ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜು ಬೇಕೆಂಬ ಬೇಡಿಕೆಯನ್ನು ಇಟ್ಟಿದ್ದಾರೆ. ಸರ್ಕಾರಿ ಹೈಸ್ಕೂಲ್, ಕಾಲೇಜು ಆಗಬೇಕೆಂಬ ಬೇಡಿಕೆ ಎಲ್ಲಾ ಭಾಗದಿಂದ ಬರುತ್ತಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಇವತ್ತಿನದಿವಸ ಹೆಚ್ಚಿನ ವಿದ್ಯಾರ್ಜನೆ ಮಾಡಬೇಕೆಂಬ ಅಪೇಕ್ಷೆಗಳು ವಿದ್ಯಾರ್ಥಿಗಳಲ್ಲಿ ಜಾಸ್ತಿಯಾಗಿವೆ. ಆದ್ದರಿಂದ, ಇದರ ಬೇಡಿಕೆಗಳ ಒತ್ತಡಗಳು ಜಾಸ್ತಿ ಇವೆ. ಇದರ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸುತ್ತಿದ್ದೇವೆ. ಬಸವನಗುಡಿ ಕ್ಷೇತ್ರದಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜು ಇಲ್ಲ, ಆದ್ದರಿಂದ, ಅಲ್ಲಿಗೆ ಕೊಡಬೇಕೆಂಬುದಕ್ಕೆ ನಾವು ಸ್ಪಂದಿಸಿದ್ದೇವೆಂಬುದು ಮಾನ್ಯ ರವಿಸುಬ್ರಮಣ್ಯರವರಿಗೂ ಸಹ ಗೊತ್ತಿದೆ. ಆದ್ದರಿಂದ, ಮುಂದಿನ ದಿನಗಳಲ್ಲಿ ಆ ಭಾಗಕ್ಕೆ ಆದ್ಯತೆ ಮೇಲೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅನುದಾನಿತ ಮತ್ತು ಅನುದಾನ ರಹಿತ ಸೇರಿ 22 ಜ್ಯೂನಿಯರ್ ಕಾಲೇಜುಗಳು ಅವರ ಕ್ಷೇತ್ರದಲ್ಲಿವೆ. ಹೆಚ್ಚು ಆರ್ಥಿಕ ಭಾರ ಬರುವುದಿಲ್ಲವೆಂಬ ಉದ್ದೇಶಕ್ಕಾಗಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸರ್ಕಾರಿ ಕಾಲೇಜುಗಳಲ್ಲಿ ಓದಬೇಕೆಂಬ ಅಪೇಕ್ಷೆಯನ್ನು ಈಡೇರಿಸುವಂಥ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಸದನಕ್ಕೆ ಬಹಳ ಹೆಮ್ಮೆಯಿಂದ ತಿಳಿಸುವುದಕ್ಕೆ ಬಯಸುವುದೇನೆಂದರೆ, ಅವರು ವಿಜ್ಞಾನ ಭಾಗವನ್ನು ಕೇಳಿದ್ದಾರೆ ಮತ್ತೆ ಅನೇಕರು ವಾಣಿಜ್ಯ ಭಾಗವನ್ನು ಕೇಳಿದ್ದಾರೆ. ಈಗಾಗಲೇ ಎಲ್ಲೆಲ್ಲಿ ಜ್ಯೂನಿಯರ್ ಕಾಲೇಜುಗಳಿವೆಯೋ ಅಲ್ಲೆಲ್ಲ ವಿಜ್ಞಾನ ಶಿಕ್ಷಣಕ್ಕೆ ಆದ್ಯತೆ ಕೊಡಬೇಕೆಂದು ಮತ್ತು ನಮ್ಮ ಮಕ್ಕಳಿಗೆ ವಿಜ್ಞಾನದ ವಿಷಯದಲ್ಲಿ ಹೆಚ್ಚು ಶಿಕ್ಷಣ ಸಿಗಬೇಕೆಂಬ ಉದ್ದೇಶಕ್ಕಾಗಿ ನಾವು ಕಳೆದ ಮುರು ವರ್ಷಗಳಲ್ಲಿ 361

ಕಾಲೇಜುಗಳಲ್ಲಿ ವಿಜ್ಞಾನ ಭಾಗವನ್ನು ಪ್ರಾರಂಭಿಸಿದ್ದೇವೆ. ಆರ್ಟ್ಸ್ ಓದುವುದರಿಂದ ಎಷ್ಟು ಪ್ರಾಮುಖ್ಯತೆ ಇದೆ ಎಂದು ಮತ್ತು ಮುಂದಿನ ದಿನಗಳಲ್ಲಿ ಇದರಿಂದ ಎಷ್ಟು ಉದ್ಯೋಗದ ಅವಕಾಶಗಳಿವೆ ಎಂಬುದು ನಮಗೆ ಗೊತ್ತಿದೆ. ಆದ್ದರಿಂದ, ಕಾಮರ್ಸ್ ವಿಭಾಗಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ರಾಜ್ಯದಲ್ಲಿ ಸುಮಾರು 267 ಕಾಲೇಜುಗಳಲ್ಲಿ ಕಾಮರ್ಸ್ ವಿಭಾಗವನ್ನು ಪ್ರಾರಂಭ ಮಾಡುವುದಕ್ಕೆ ನಾವು ಅವಕಾಶ ಕೊಟ್ಟಿದ್ದೇವೆ. ಈಗಾಗಲೇ ಈ ವಿಭಾಗ ಪ್ರಾರಂಭವಾಗಿದೆ. ಕಳೆದ ಮೂರು ವರ್ಷಗಳಿಂದ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಹೆಚ್ಚುವರಿಯಾಗಿ ನಡೆದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಮತ್ತು ವಿಜ್ಞಾನಕ್ಕೆ ನಮ್ಮ ಸರ್ಕಾರ ಆದ್ಯತೆಯನ್ನು ಕೊಟ್ಟಿದೆ. ಬಸವನಗುಡಿ ಕ್ಷೇತ್ರಕ್ಕೂ ಸಹ ಕೊಡುತ್ತೇವೆ. ಮುಂದಿನ ವರ್ಷದಿಂದ First year PUC ಪಿಸಿಎಂಬಿ ತರಗತಿಗೆ ಎನ್‌ಸಿಎಫ್ ಆಧಾರದ ಮೇಲೆ ರಚನೆಯಾಗಿರುವ ಸಿಬಿಎಸ್‌ಇ ಸಿಲಬಸ್ ಅನ್ನು ನಾವು ಜೋಡಿಸಿಕೊಳ್ಳುತ್ತಿದ್ದೇವೆ. ವಿಜ್ಞಾನ ವಿಭಾಗಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ಕೊಟ್ಟಿದೆ ಮತ್ತೆ ಬಸವನಗುಡಿ ಕ್ಷೇತ್ರಕ್ಕೆ ಏನು ಆದ್ಯತೆ ಕೊಡಬೇಕೋ ಅದನ್ನು ಮುಂದಿನ ದಿನಗಳಲ್ಲಿ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಉಪನ್ಯಾಸಕರಿಲ್ಲ, ಇದರ ಬಗ್ಗೆ ಕೂಡ ಗಮನಹರಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಹಾಲಪ್ಪನವರು ಉಪನ್ಯಾಸಕರ ಕುರಿತಂತೆ ಉಲ್ಲೇಖ ಮಾಡಿದ್ದಾರೆ ವಿಜ್ಞಾನ ವಿಭಾಗಕ್ಕೆ ಸಂಬಂಧಪಡುವಂಥ 1765 ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದು, ಸದ್ಯದಲ್ಲಿಯೇ ಅರ್ಜಿಯನ್ನು ಆಹ್ವಾನ ಮಾಡುತ್ತಿದ್ದೇವೆ.

ಶ್ರೀ ಹೆಚ್. ಹಾಲಪ್ಪ : ಅಲ್ಲೊಂದು ಟೆಕ್ನಿಕಲ್ ತೊಂದರೆ ಇದೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಬಹಳಷ್ಟು ವಿಜ್ಞಾನ ವಿಭಾಗದ ಕಾಲೇಜುಗಳಲ್ಲಿ Science equipments ಇಲ್ಲ.

ಶ್ರೀ ಯು.ಟಿ. ಖಾದರ್ : ಮಾನ್ಯ ಸಭಾಧ್ಯಕ್ಷರೆ, ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಅತ್ಯಗತ್ಯವಾಗಿರುತ್ತದೆ. ಆದರೆ, ಯಾವುದೇ ಒಂದು ಕಾಲೇಜಿಗೆ ಪ್ರಯೋಗಾಲಯ ಸ್ಯಾಂಕ್ಷನ್ ಆಗಿಲ್ಲ. ಆದ್ದರಿಂದ, ಒಂದೊಂದು ಕಾಲೇಜಿಗೆ ತಕ್ಷಣ ಪ್ರಯೋಗಾಲಯವನ್ನು ಸ್ಯಾಂಕ್ಷನ್ ಮಾಡಬೇಕು. ಪ್ರಯೋಗಾಲಯ ಇದ್ದಾಗ ಮಾತ್ರ ವಿದ್ಯಾರ್ಥಿಗಳು ಕಾಲೇಜಿಗೆ ಸೇರಿಕೊಳ್ಳುತ್ತಾರೆ. ಇಲ್ಲದಿದ್ದರೆ ಸೇರುವುದಿಲ್ಲ.

ಶ್ರೀ ಎಲ್.ವಿ. ರವಿಸುಬ್ರಮಣ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಜಾಗದ ಅವಶ್ಯಕತೆ ಬಹಳ ಕಡಿಮೆ, ಹಾಲಿ ಇರುವಂಥ ಜಾಗಗಳಲ್ಲಿ ಪಾರ್ಕ್ ಮಾಡಿ ಜನರಿಂದ ಬೇಡಿಕೆ ಬಂದಿದೆ. ಈಗ ಅಲ್ಲಿ ಒಂದು ಕಾಲೇಜಿನ ಕಟ್ಟಡ ಪ್ರಾರಂಭ ಮಾಡದಿದ್ದರೆ ಮುಂದಿನ ದಿನಗಳಲ್ಲಿ ನಮಗೆ ಜಾಗ ಸಿಗುವುದಿಲ್ಲ. ಆದ್ದರಿಂದ, ಕಾಲೇಜು ಪ್ರಾರಂಭ ಮಾಡುವುದರ ಬಗ್ಗೆ ಮಾನ್ಯ ಸಚಿವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನದೊಂದು ಉಪ ಪ್ರಶ್ನೆ ಏನೆಂದರೆ, ಕತ್ತರಿಗುಪ್ಪೆ ಮತ್ತು ಶ್ರೀನಗರ ಸರ್ಕಾರಿ ಶಾಲೆಯಲ್ಲಿ 9 ಮತ್ತು 10ನೇ ತರಗತಿಗೆ ಪರ್ಮಿಷನ್ ಕೇಳಿದ್ದೇನೆ. 37 ವಿದ್ಯಾರ್ಥಿಗಳು ಮಾತ್ರ ಕತ್ತರಿಗುಪ್ಪೆಯಲ್ಲಿ ಮತ್ತು 61 ವಿದ್ಯಾರ್ಥಿಗಳು ಶ್ರೀನಗರದ ಸರ್ಕಾರಿ ಶಾಲೆಯಲ್ಲಿದ್ದಾರೆಂದು ಉತ್ತರದಲ್ಲಿ ಹೇಳಿದ್ದೀರಿ. ಕತ್ತರಿಗುಪ್ಪೆಯಲ್ಲಿ ಶಾಲೆಯಲ್ಲಿದ್ದಂಥ ಸುಮಾರು 100 ಕ್ಕಿಂಥ ಹೆಚ್ಚು ವಿದ್ಯಾರ್ಥಿಗಳಿಗೆ ಹೈಸ್ಕೂಲಿನ 9 ಮತ್ತು 10ನೇ ತರಗತಿಗಳಿಗೆ ಬೇರೆ ಶಾಲೆಗಳಲ್ಲಿ ಸೀಟ್ ಸಿಗದೆ ಇರುವುದರಿಂದ ಅಲ್ಲಿನ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದ, ತಾವು ಅಲ್ಲಿ 9 ಮತ್ತು 10ನೇ ತರಗತಿಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟರೆ ಖಂಡಿತವಾಗಿಯೂ ಕೂಡ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಶ್ರೀನಗರದಲ್ಲಿ ಶಾಲೆಯನ್ನು ಪ್ರಾರಂಭ ಮಾಡುವುದಕ್ಕೆ ಬೇಕಾಗಿರುವಂಥ ಕೊಠಡಿಗಳು ಮತ್ತೆ ಇತರೇ ಮೂಲಭೂತ ಸೌಕರ್ಯಗಳಿಲ್ಲ. ಆದ್ದರಿಂದ, ಮುಂದಿನ ಶೈಕ್ಷಣಿಕ ವರ್ಷದಿಂದ ದಯವಿಟ್ಟು 9 ಮತ್ತು 10ನೇ ತರಗತಿಗೆ ಅವಕಾಶ ಮಾಡಿಕೊಡಬೇಕೆಂದು ನನ್ನ ಮನವಿಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ವಿಜ್ಞಾನ ವಿಭಾಗವನ್ನು ಬಸವನಗುಡಿ ಕ್ಷೇತ್ರದಲ್ಲಿ ಪ್ರಾರಂಭಿಸುವುದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಮತ್ತೆ ಮಾನ್ಯ ಸದಸ್ಯರು ಹೇಳಿದಂತೆ ಶ್ರೀನಗರದಲ್ಲಿ ಮೂಲಭೂತ ಸೌಕರ್ಯಗಳಿರುವುದರಿಂದ ಅಲ್ಲಿನ ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸಬೇಕೆಂಬ ಅವರ ಬೇಡಿಕೆಯನ್ನು ನಾವು ಸಕಾರಾತ್ಮಕವಾಗಿ ಪರಿಶೀಲಿಸುತ್ತೇವೆ.

ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ

30 (323) ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ):– ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆಯ ಉದ್ದೇಶವು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು?